

# ಪ್ರಕೃತಿ ವಿಸ್ಮಯ

ಯಲ್ಲೋ ಸ್ಟೋನ್ ಉತ್ತರ ಅಮೆರಿಕಾದ ಮೊದಲ ರಾಷ್ಟ್ರೀಯ ಉದ್ಯಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವ್ಯೋಮಿಂಗ್ ರಾಜ್ಯದಲ್ಲಿರುವ ಇದರ ವ್ಯಾಪ್ತಿ ಮೊಂಟಾನಾ ಮತ್ತು ಇಡಾಹೊ ರಾಜ್ಯಗಳಿಗೂ ಹಬ್ಬಿದೆ.

ಈ ಉದ್ಯಾನವನ 400ಕ್ಕೂ ಹೆಚ್ಚು ಬಿಸಿನೀರಿನ ಬುಗ್ಗೆಗಳನ್ನು ಹೊಂದಿರುವುದು ವಿಶೇಷ. ಇದು ಮಣ್ಣಿನ ಜ್ವಾಲಾಮುಖಿಗಳನ್ನು, ಡ್ರಾಗನ್ ವೋಲ್ಕನೋಗಳನ್ನು, ದೊಡ್ಡ ಕೊರಕಲುಗಳು ಹಾಗೂ ಉದ್ದ ನದಿಗಳನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ. ಈ ಬೃಹತ್ ಉದ್ಯಾನದಲ್ಲಿ 290ಕ್ಕೂ ಹೆಚ್ಚು ಜಲಪಾತಗಳಿವೆ! ಉನ್ನತ ಪರ್ವತ ಸ್ತೋಮದ ದಟ್ಟ ಅರಣ್ಯದಲ್ಲಿ 320ಕ್ಕೂ ಹೆಚ್ಚು ಜಾತಿಯ ಪಕ್ಷಿ ಸಂಕುಲವಿದೆ. ಈ ಬೃಹತ್ ಉದ್ಯಾನವನದ ಚೆಲುವಿಗೆ, 132 ಚದರ ಮೈಲಿ ವಿಸ್ತೀರ್ಣದ ಯಲ್ಲೋ ಸ್ಟೋನ್ ಸರೋವರ ಮುಕುಟಪ್ರಾಯ ಎನ್ನಿಸಿಕೊಂಡಿದೆ.

ಈ ನ್ಯಾಷನಲ್ ಪಾರ್ಕ್ ವನ್ಯಮೃಗಗಳಿಗೂ ಖ್ಯಾತಿ ಪಡೆದಿದೆ. ಜಿಂಕೆ, ಕಾಡುಕೋಣ, ಕರಡಿ, ಸಾರಂಗ, ನರಿ ಮುಂತಾದ ಪ್ರಾಣಿಗಳ ವಾಸಸ್ಥಾನವಿದು. ಈ ಪ್ರಾಣಿಗಳು ತಮ್ಮನ್ನು ತಾವು ಚಳಿಯಿಂದ ರಕ್ಷಿಸಿಕೊಳ್ಳಲು ಬಿಸಿನೀರಿನ ಕುಂಡಗಳ ಹತ್ತಿರ ಬಂದು ನಿಲ್ಲುತ್ತವೆಯಂತೆ. ಸುಮಾರು 600 ವರ್ಷಗಳ ಹಿಂದೆ ಪೃಥ್ವಿಯ ಗರ್ಭದಿಂದ ಜ್ವಾಲಾಮುಖಿಯ ಮೂಲಕ ಹೊರಬಂದ ಲಾವಾ ಯಲ್ಲೋಸ್ಟೋನ್ ನಿರ್ಮಾಣ ವಾಗಲು ಕಾರಣವಾಯಿತು. ಈ ವರ್ಣರಂಜಿತ ತಾಣಕ್ಕೆ ಸುಣ್ಣದ ಕಲ್ಲುಗಳಿಂದಾಗಿ ಅಲ್ಲಲ್ಲಿ ಹಳದಿ ಬಣ್ಣ ಬಂದಿದ್ದರಿಂದ ಇದಕ್ಕೆ 'ಯಲ್ಲೋ ಸ್ಟೋನ್' ಎಂಬ ಹೆಸರಿದೆ.

ರಾಷ್ಟ್ರೀಯ ಉದ್ಯಾನವನಕ್ಕೆ 5 ಕಡೆಯಿಂದ ಪ್ರವೇಶದ್ವಾರಗಳಿದ್ದು ಒಟ್ಟು 9 ವೀಕ್ಷಕರ ಕೇಂದ್ರಗಳಿವೆ. ಉತ್ತರ, ಈಶಾನ್ಯ, ಪೂರ್ವ, ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳಿಂದ ಪ್ರವೇಶಿಸಬಹುದು. ಪ್ರತಿ ಪ್ರವೇಶ ದ್ವಾರದಲ್ಲೂ ಉದ್ಯಾನವನದ ಕಾರ್ಯಾಲಯವಿದ್ದು ರುಚಿಕರ ಆಹಾರ ಸಿಗುವ ಫುಡ್‌ಕೋರ್ಟ್, ಸಲಹಾ ಕೇಂದ್ರ ಮತ್ತು ಮಾರಾಟ ಮಳಿಗೆಗಳಿವೆ. ಉತ್ತರದ ದ್ವಾರದಲ್ಲಿರುವ ಮುಖ್ಯ ಕಾರ್ಯಾಲಯದ ಬಳಿಯೇ ಆಕರ್ಷಕ ರೂಸ್‌ವೆಲ್ಟ್ ಹೆಬ್ಬಾಗಿಲಿದೆ. ಪಶ್ಚಿಮದ್ವಾರಕ್ಕೆ ಹತ್ತಿರದಲ್ಲಿ ಚಿತ್ತಾಕರ್ಷಕ ಬಿಸಿ ನೀರ ಬುಗ್ಗೆಯ ತಾಣವಿದ್ದು ಸ್ವಲ್ಪ ಮುಂದೆ ಹೋದರೆ ಮನಮೋಹಕ ಇಡಾ ಫಾಲ್ಸ್ ಕಾಣಸಿಗುತ್ತದೆ.

ಯೆಲ್ಲೋ ಸ್ಟೋನ್ ಉದ್ಯಾನವನ ಎಷ್ಟು ನೋಡಿದರೂ ಮುಗಿಯದ ಸಂಪನ್ಮೂಲ. ಕಣ್ಮನ ತಣಿಸುವ ಪ್ರಕೃತಿಯ ಈ ಅಚ್ಚರಿಯನ್ನು ಕಣ್ತುಂಬಿಕೊಳ್ಳುವುದೇ ಅಪರೂಪದ ಅನುಭವ. ಶೇಕಡಾ 80ರಷ್ಟು ಪ್ರದೇಶದಲ್ಲಿ ಕಾಡು ಇದ್ದು ಶೇಕಡಾ 15ರಷ್ಟು ಹಸಿರು ಹುಲ್ಲುಗಾವಲು ಇದೆ. ಪ್ರವಾಸಿಗರು ನೋಡಲೇಬೇಕಾದ ಹತ್ತು ಪ್ರದೇಶಗಳು ಇಲ್ಲಿವೆ.

**ದಿ ಓಲ್ಡ್ ಫೇತ್‌ಫುಲ್ ಗೇಸರ್ ಬೇಸಿನ್/ಅಪ್ಪರ್ ಬೇಸಿನ್:**

ಸುಮಾರು 2 ಗಂಟೆಗಳ ಕಾಲ ಮರದ ಹಲಗೆಯ ಹಾಸಿನ ದಾರಿಯಲ್ಲಿ ನಡೆಯುತ್ತಾ ಹೋದಂತೆ ಮಾರ್ಗದ ಇಕ್ಕೆಲಗಳ ಉದ್ದಕ್ಕೂ ಬಿಸಿನೀರಿನ ಬುಗ್ಗೆಗಳು ನರ್ತಿಸುವ ಮತ್ತು ಪಿಸುಗುಡುವ ಮೈ ನವಿರೇಳಿಸುವ ಅನುಭವ. ದಿ ಓಲ್ಡ್ ಫೇತ್‌ಫುಲ್ ಹೆಸರಿನ ಈ ಬಿಸಿನೀರ ಬುಗ್ಗೆ 2ರಿಂದ 5 ನಿಮಿಷಗಳವರೆಗೆ ಸುಮಾರು 3700ರಿಂದ 8400 ಗ್ಯಾಲನ್ನಷ್ಟು ಬಿಸಿನೀರನ್ನು 30ರಿಂದ 50 ಮೀಟರ್ ಎತ್ತರಕ್ಕೆ ಚಿಮ್ಮಿಸುತ್ತದೆ! ಇದು ನಿಜಕ್ಕೂ ಬಹುದೊಡ್ಡ ಸೋಜಿಗ.

ಪ್ರತಿ 90 ನಿಮಿಷಕ್ಕೊಂದು ಬಾರಿ ಖಂಡಿತವಾಗಿ ನೀರು ಚಿಮ್ಮುವ ಈ ಬುಗ್ಗೆಯ ನಿಖರತೆಗೆ ಯಾರಾದರೂ ತಲೆದೂಗಲೇಬೇಕು. ಇದರಂತೆಯೇ